**1**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಂ. 132. ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು – 560 027

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿ ಕೆಲಸ ನಿರ್ವಹಿಸುತ್ತಿರುವ ಪತ್ತಿನ ಸಹಕಾರಿಗಳು ನಿರ್ವಹಿಸಬೇಕಾದ ದ್ರವ್ಯಾಸ್ತಿ ನಿರ್ವಹಣೆ ಕುರಿತು ಆಡಳಿತ ಮಂಡಳಿ ಸಭೆ ಮತ್ತು ಸಾಮಾನ್ಯ ಸಭೆಯಲ್ಲಿ ಸಾಕಷ್ಟು ಚರ್ಚೆಯ ನಂತರ 11 ಜನವರಿ 2005 ರಲ್ಲಿ ಮಾರ್ಗಸೂಚಿಯನ್ನು ನೀಡಲಾಗಿತ್ತು. ಮತ್ತು ಎರಡು ವರ್ಷಗಳ ನಂತರ ಇದನ್ನು ಪುನರ್‌ವಿಮರ್ಶೆ ಮಾಡಲು ನಿರ್ಣಯಿಸಲಾಗಿತ್ತು. ಅದರಂತೆ ದಿನಾಂಕ 9 ಸೆಪ್ಟೆಂಬರ್ 2007ರಂದು ಬೆಂಗಳೂರಿನಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಈ ಕುರಿತು ವಿವರವಾಗಿ ಚರ್ಚಿಸಲಾಯಿತು. ಸದರಿ ಸಭೆ ಅಂಗೀಕರಿಸಿದಂತೆ ಹಿಂದಿನ ಮಾರ್ಗಸೂಚಿಯಲ್ಲಿ ಸೂಕ್ತ ಬದಲಾವಣೆ ಮಾಡಿ ಈ ಮಾರ್ಗಸೂಚಿಯನ್ನು ಈ ಕೆಳಗಿನಂತೆ ಹೊರಡಿಸಲಾಗಿದೆ.

## ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ

### ಕಾಯ್ದೆ ಕಲಂ 53 (7) (ಎ) (ಅಡಿ)

**ಸಂಖ್ಯೆ : 2/2007–08** **7 ಫೇಬ್ರುವರಿ 2008**

1. ಸದಸ್ಯನೊಬ್ಬನಿಗೆ ನೀಡುವ ಸಾಲದ ಒಟ್ಟು ಮೊತ್ತವು ಯಾವುದೇ ಸಂದರ್ಭದಲ್ಲಿ ಅವನಿಗೆ ನೀಡುವ ಎಲ್ಲಾ ಸಾಲಗಳ ಮೊತ್ತ ಸೇರಿ, ಸಹಕಾರಿಯು ದುಡಿಯುವ ಬಂಡವಾಳದ ಶೇ.5ನ್ನು ಮೀರಬಾರದು.
2. ಸಹಕಾರಿಯು ನಿರ್ದೇಶಕರು ಹಾಗೂ ಅವರ ಸಂಬಂಧಿಗಳಿಗೆ ಸೇರಿ ನೀಡಿದ ಒಟ್ಟು ಸಾಲದ ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇ.10ನ್ನು ಮೀರಬಾರದು.
3. ಯಾವುದೇ ಸಂದರ್ಭದಲ್ಲಿ ಸಹಕಾರಿಯು ನೀಡುವ ಒಟ್ಟು ಸಾಲ ಹಾಗೂ ಮುಂಗಡಗಳು ಸಹಕಾರಿಯಲ್ಲಿರುವ ಠೇವಣಿಗಳ ಶೇ. 80 ಮತ್ತು ಶೇರು ಹಣ ಮತ್ತು ಮೀಸಲು ನಿಧಿಯ ಒಟ್ಟು ಮೊತ್ತವನ್ನು ಮೀರಬಾರದು. ಸಹಕಾರಿಯು

ಹೊಂದಿರುವ ಠೇವಣಿಯ ಶೇ.20ನ್ನು ದ್ರವ್ಯಾಸ್ತಿ ನಿಧಿಯನ್ನಾಗಿ ವ್ಯವಹಾರದ ಹೊರಗಡೆ ಕಾಯ್ದೆ ಕಲಂ 18ರಂತೆ ವಿನಿಯೋಗಿಸತಕ್ಕದ್ದು.

4. ಈ ಮಾರ್ಗಸೂಚಿಯ 2ನೇ ಅಂಶವು ತನ್ನ ಉಪವಿಧಿಯಲ್ಲಿ ನಾಮ ಮಾತ್ರ ಹಾಗೂ ಸಹ ಸದಸ್ಯರನ್ನು ಹೊಂದಲು ಅವಕಾಶ ಕಲ್ಪಿಸದೇ ಕೇವಲ ಮತ ಚಲಾವಣೆಯ ಹಕ್ಕನ್ನು ಹೊಂದಿದ ಸದಸ್ಯರನ್ನು ಹೊಂದಿರುವ ಸಹಕಾರಿಗಳಿಗೆ ಮತ್ತು ಸದಸ್ಯೇತರರೊಂದಿಗೆ ವ್ಯವಹಾರಕ್ಕೆ ಅವಕಾಶ ಹೊಂದಿರದ ಸಹಕಾರಿಗಳಿಗೆ ಅನ್ವಯಿಸುವುದಿಲ್ಲ.

5. ಮಾರ್ಗಸೂಚಿಗಳು 31 ಮಾರ್ಚ್ 2008 ರಿಂದ ಜಾರಿಗೆ ಬರುತ್ತವೆ.

6. ಈ ಮಾರ್ಗಸೂಚಿಯಲ್ಲಿ 'ಸಂಬಂಧಿ' ಎಂದರೆ ತಂದೆ, ತಾಯಿ, ಗಂಡ, ಹೆಂಡತಿ ಗಂಡುಮಕ್ಕಳು, ಗಂಡುಮಕ್ಕಳ ಹೆಂಡಂದಿರು, ಹೆಣ್ಣುಮಕ್ಕಳು, ಹೆಣ್ಣುಮಕ್ಕಳ ಗಂಡಂದಿರು, ಪಾಲು ಆಗದ ಅಣ್ಣತಮ್ಮಂದಿರುವ ಇವರನ್ನೆಲ್ಲ ಒಳಗೊಂಡಿರುತ್ತದೆ.

7. ಈ ಮಾರ್ಗಸೂಚಿಯನ್ನು ಉಲ್ಲಂಘಿಸಿದ ಪತ್ತಿನ ಸಹಕಾರಿಗಳು ಕಾಯ್ದೆ ಕಲಂ 38 (1) (iv) ರಡಿ ಕ್ರಮಕ್ಕೆ ಅರ್ಹವಾಗುತ್ತದೆ,

ಈ ಮಾರ್ಗಸೂಚಿಯನ್ನು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಇಂದು ಅಂದರೆ, 7ನೇ ಫೆಬ್ರುವರಿ 2008ರಂದು ನೀಡಲಾಗಿದೆ.

ಸಹಿ /-
**(ಸಚಿನ್ ಪಾಟೀಲ)**
ವ್ಯವಸ್ಥಾಪಕ ನಿರ್ದೇಶಕ